ಓ ಎಸ್ ನಂಃ 220-15
ಪಿ ಡಬ್ಲ್ಯೂ ಃ 2

ದಿಃ 20-03-2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲುಃ ಶ್ರೀ ಎ ಎಸ್ ಎಸ್ ವಕೀಲರಿಂದ

5. ಈ ದಾವೆಯ 3 ನೇ ಪ್ರತಿವಾದಿ ನನ್ನ ತಂದೆ ಎಂದರೆ ನಿಜ. ನನ್ನ ತಂದೆ ಈ ದಾವೆಯಲ್ಲಿ ಪ್ರತಿವಾದ ಪತ್ರ ಸಲ್ಲಿಸಿರುವುದಿಲ್ಲ. ನಾನು ಬಿ ಎ ಪದವಿ ಓದಿರುತ್ತೇನೆ. ನಾನು ದಿನಾಂಕಃ 25-07-1985 ರಲ್ಲಿ ಜನಿಸಿರುತ್ತೇನೆ. ಈ ದಾವೆಯನ್ನು ಅಜ್ಜನ ಆಸ್ತಿಯಲ್ಲಿ ಭಾಗ ಬೇಕೆಂದು ವಾದಿಗಳು ಹೂಡಿರುತ್ತಾರೆ. 4 ನೇ ಪ್ರತಿವಾದಿ ನನಗೆ ಚಿಕ್ಕಪ್ಪ ಆಗಬೇಕು. 4 ನೇ ಪ್ರತಿವಾದಿ ಈ ದಾವೆಯಲ್ಲಿ ತಕರಾರು ಸಲ್ಲಿಸಿರುತ್ತಾರೋ ಇಲ್ಲವೋ ಗೊತ್ತಿಲ್ಲ. ವಾದಿಗಳು 4 ನೇ ಪ್ರತಿವಾದಿಯ ಮಕ್ಕಳು ಎಂದರೆ ನಿಜ. ಸುಮಾರು 25 ವರ್ಷಗಳಿಂದ ವಾದಿಗಳು 4 ನೇ ಪ್ರತಿವಾದಿಯ ಜೊತೆ ವಾಸವಿಲ್ಲ ಎಂದರೆ ನಿಜ. 4 ನೇ ಪ್ರತೀವಾದಿಯ ಹೆಂಡತಿಯ ಹೆಸರು ನರಸಮ್ಮ ಆಗಿರುತ್ತದೆ. ನರಸಮ್ಮ ಸಹ ಸುಮಾರು 25 ವರ್ಷಗಳಿಂದ 4 ನೇ ಪ್ರತಿವಾದಿಯ ಜೊತೆ ವಾಸವಿಲ್ಲ ಎಂದರೆ ನಿಜ. ವಾದಿಗಳು ಹಾಗೂ 4 ನೇ ಪ್ರತಿವಾದಿಯ ಹೆಂಡತಿ ನರಸಮ್ಮ ಬೆಂಗಳೂರಿನಲ್ಲಿ ವಾಸವಿದ್ದಾರೆ ಎಂದರೆ ನಿಜ. ವಾದಿಗಳು ಮತ್ತು ನರಸಮ್ಮ ಕೂಡ್ಲೂರು ನಲ್ಲಿ ವಾಸವಿಲ್ಲ ಎಂದರೆ ನಿಜ. ಸಾಕ್ಷಿ ಮುಂದುವರೆದು ಬಂದು ಹೋಗಿ ಮಾಡುತ್ತಾರೆ ಎಂದು ಹೇಳುತ್ತಾರೆ. ವಾದಿಗಳು ಮತ್ತು ನರಸಮ್ಮರವರು ಕುಡ್ಲೂರುನಲ್ಲಿ ವಾಸವಿರುವ ಬಗ್ಗೆ ಗುರುತಿನ ಚೀಟಿಗಳು ಇಲ್ಲ ಎಂದರೆ ನಿಜ.

6. ವಾದಿಗಳು ದಾವಾ ಆಸ್ತಿಗಳಲ್ಲಿ ವ್ಯವಸಾಯ ಮಾಡುವುದಿಲ್ಲ ನಾವು ಬೆಳೆದ ಬೆಳೆಯನ್ನು ತೆಗೆದುಕೊಂಡು ಹೋಗುತ್ತಾರೆ. ನಾವು ಮತ್ತು ನಮ್ಮ ತಂದೆ ವಾಸ ಬೇರೆ ಬೇರೆಯಾಗಿ ಮಾಡುತ್ತಿದ್ದೇವೆ ಎಂದರೆ ನಿಜ. ಸಾಕ್ಷಿ ಮುಂದುವರೆದು ಜಮೀನುಗಳು ಒಟ್ಟಿಗೆ ಇರುತ್ತವೆ ಎಂದು ಹೇಳುತ್ತಾರೆ.

7. 4 ನೇ ಪ್ರತಿವಾದಿ ಮತ್ತು ಅವರ ಹೆಂಡತಿಯ ಮಧ್ಯೆ ಬೆಂಗಳೂರು ನ್ಯಾಯಾಲಯದಲ್ಲಿ ಮೊಕದ್ದಮೆ ನಡೆದಿರುವ ಬಗ್ಗೆ ನನಗೆ ಗೊತ್ತಿಲ್ಲ. ನರಸಮ್ಮರವರು ಬೆಂಗಳೂರು ನ್ಯಾಯಾಲಯದಲ್ಲಿ ಯಶವಂತಪುರದ ಆಸ್ತಿ ಮತ್ತು ಜಾರಕಬಂಡೆ ಕಾವಲ್ ನಲ್ಲಿರುವ ಆಸ್ತಿಯ ಮೇಲೆ ಭಾಗಕ್ಕಾಗಿ ದಾವೆ ಸಲ್ಲಿಸಿದ್ದರು ಆ ಆಸ್ತಿಗಳನ್ನು ಜೀವನಾಂಶಕ್ಕಾಗಿ ವಾದಿಗಳಿಗೆ ಹಾಗೂ ನರಸಮ್ಮರವರಿಗೆ ಕೊಟ್ಟಿದ್ದರು ಎಂದರೆ ಗೊತ್ತಿಲ್ಲ. ನನಗೆ ನಾರಾಯಣಪ್ಪ, ನರಸಮ್ಮ ಮತ್ತು ವಾದಿಗಳ ಮಧ್ಯೆ ಏನು ವ್ಯವಹಾರ ಆಗಿದೆ ಗೊತ್ತಿಲ್ಲ. ನನ್ನ ಅಜ್ಜನಿಗೂ ಮತ್ತು 4 ನೇ ಪ್ರತಿವಾದಿಗೆ ಮಾತುಕತೆ ಇಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ನರಸಪ್ಪರವರ ಕಡೆಯಿಂದ 4 ನೇ ಪ್ರತಿವಾದಿಯ ಕುಟುಂಬದ ವಿಚಾರಗಳನ್ನು ತಿಳಿದುಕೊಳ್ಳಲು ಪ್ರಯತ್ನ ಪಟ್ಟಿಲ್ಲ. ವಾದಿಗಳು ಈ ದಾವೆ ಹೂಡಿರುವ ಬಗ್ಗೆ 4 ನೇ ಪ್ರತಿವಾದಿಯ ಜೊತೆ ನಾನು ವಿಚಾರಿಸಿರುವುದಿಲ್ಲ. ನರಸಮ್ಮರವರಿಗೆ ಈಗಾಗಲೇ ಜೀವನಾಂಶಕ್ಕಾಗಿ ಯಶವಂತಪುರ ಹಾಗೂ ಜಾರಕಬಂಡೆ ಕಾವಲ್ ನಲ್ಲಿರುವ ಆಸ್ತಿಗಳನ್ನು ಕೊಟ್ಟಿದ್ದು ಅವರಿಗೆ ದಾವಾ ಆಸ್ತಿಗಳಲ್ಲಿ

ಭಾಗದ ಹಕ್ಕು ಇರುವುದಿಲ್ಲ, ಆದರೂ ಸಹ ನಾನು ವಾದಿಗಳ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

8. ನರಸಮ್ಮರವರಿಗೆ ಬೆಂಗಳೂರಿನಲ್ಲಿ ನಿವೇಶನವನ್ನು ಮತ್ತು ಮನೆಯನ್ನು ಕೊಡುವ ಬಗ್ಗೆ ಪಂಚಾಯ್ತಿಯಾಗಿದ್ದು, ಪಂಚಾಯ್ತಿಯಲ್ಲಿ ನನ್ನ ತಂದೆ ಸಹ ಇದ್ದರು ಎಂದರೆ ಸರಿಯಲ್ಲ. ನನ್ನ ತಂದೆಗೆ ಹಾಗೂ 4ನೇ ಪ್ರತಿವಾದಿಗೆ ಆಗುವುದಿಲ್ಲ ಆದ ಕಾರಣ 4ನೇ ಪ್ರತಿವಾದಿಗೆ ತೊಂದರೆ ಕೊಡಲು ವಾದಿಗಳ ಜೊತೆ ಸೇರಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗಳು ಹಾಗೂ ನರಸಮ್ಮರವರು ಯಶವಂತಪುರದಲ್ಲಿ ಇರುವ ಬಗ್ಗೆ ಹೇಳಿದ್ದು ನಾನೇ ಅಲ್ಲಿಗೆ ಹೋಗಿಲ್ಲ. ಯಶವಂತಪುರದ ಮನೆ ವಾದಿಗಳಿಗೆ ಮತ್ತು ನರಸಮ್ಮರವರಿಗೆ ಹೇಗೆ ಬಂತು ಎಂಬುದನ್ನು ನಾನು ತಿಳಿದುಕೊಂಡಿಲ್ಲ. ನನ್ನ ತಂದೆ ಮತ್ತು ಅವರ ಚಿಕ್ಕಪ್ಪಂದಿರ ಮದ್ಯೆ ಆದ ವ್ಯವಹಾರಗಳ ಬಗ್ಗೆ ಗೊತ್ತಿಲ್ಲದೇ ಇದ್ದರೂ ಸಹ 4ನೇ ವಾದಿ ಮತ್ತು ನಾನು ಸಮಕಾಲೀನರಾಗಿದ್ದರಿಂದ 4ನೇ ವಾದಿಯ ಮಾತುಕೇಳಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಈ ದಾವೆಯ ಬಗ್ಗೆ ಯಾವುದೇ ಮಾಹಿತಿ ಇಲ್ಲ. ವಾದಿಗಳು ಕೂಡ್ಲೂರಿಗೆ ಬರುವುದಿಲ್ಲ ಮತ್ತು ಬೆಳೆಗಳನ್ನು ತೆಗೆದುಕೊಂಡು ಹೋಗುವುದಿಲ್ಲ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ಉಖ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ಮಾಗಡಿ.

**ಓ ಎಸ್ ನಂಃ 220-15**
**ಪಿ ಡಬ್ಲ್ಯೂ ಃ 4**

**ದಿಃ 20-03-2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಎ ಎಸ್ ಎಸ್ ವಕೀಲರಿಂದ**

5. ನನ್ನ ತಂದೆಗೆ ಮಲ್ಲಯ್ಯ ಮತ್ತು ಚಿಕ್ಕರಂಗಯ್ಯ ಎಂದು ಎರಡು ಹೆಸರಿನಲ್ಲಿ ಕರೆಯುತ್ತಾರೆ. ನನ್ನ ಮುಖ್ಯ ವಿಚಾರಣೆಯಲ್ಲಿ ನಾನು ದಾಸಪ್ಪ ಎಂದು ನನ್ನ ತಂದೆಯ ಹೆಸರನ್ನು ಬರೆಸಿದ್ದು ಅವರು ನಿಮ್ಮ ತಂದೆ ಅಲ್ಲವಾ ಎಂದರೆ ನನ್ನ ತಂದೆಯ ಹೆಸರು ದಾಸಪ್ಪ ಎಂದು ಹೇಳುತ್ತಾರೆ. ಎಲ್ಲಾ ದಾಖಲೆಗಳಲ್ಲಿ ನನ್ನ ತಂದೆಯ ಹೆಸರು ಚಿಕ್ಕರಂಗಯ್ಯ ಎಂದು ಇದ್ದು ದಾಸಪ್ಪ ಎಂದು ಇಲ್ಲ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿ ನನಗೆ ಮಾವನಾಗಬೇಕು. 3 ನೇ ಪ್ರತಿವಾದಿ ನನ್ನ ತಂದೆಯ ಅಣ್ಣನ ಮಗಳನ್ನು ಮದುವೆಯಾಗಿರುತ್ತಾರೆ. ನಾನು 3 ನೇ ಪ್ರತಿವಾದಿಗೆ ಬಾಮೈದಾ ಎಂದರೆ ನಿಜ. ಪಿ ಡಬ್ಲ್ಯೂ 2 ಗೆ ನಾನು ಮಾವನಾಗಬೇಕು ಎಂದರೆ ನಿಜ. ನಾನು ಮತ್ತು 4 ನೇ ಪ್ರತಿವಾದಿ ಚೆನ್ನಾಗಿದ್ದು, ಏನೋ ಮಾತನಾಡತ್ತೇವೆ. 4 ನೇ ಪ್ರತಿವಾದಿಯ ಕುಟುಂಬದ ಬಗ್ಗೆ ನನಗೆ ಮಾಹಿತಿ ಇದೆ.

6. 4 ನೇ ಪ್ರತಿವಾದಿ ಮತ್ತು ನರಸಮ್ಮರವರ ಮಧ್ಯೆ ತಕರಾರು ಇದೆ ಎಂಬುದರ ಬಗ್ಗೆ ನನಗೆ ಗೊತ್ತಿಲ್ಲ. 4 ನೇ ಪ್ರತಿವಾದಿ ಹಾಗೂ ನರಸಮ್ಮ 25 ವರ್ಷಗಳಿಂದ ಬೇರೆ ಬೇರೆ ಇರುತ್ತಾರೆ ಎಂದರೆ 4 ನೇ ಪ್ರತಿವಾದಿಯ ಕುಟುಂಬದ ವಿಷಯ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನರಸಮ್ಮ ಹಾಗೂ ವಾದಿಗಳು ಎಲ್ಲಿ ವಾಸವಿದ್ದಾರೆ ಗೊತ್ತಿಲ್ಲ. ನನಗೆ ನಾರಾಯಣಪ್ಪ ಹಾಗೂ ಅವರ ಕುಟುಂಬದ ಬಗ್ಗೆ ಮಾಹಿತಿ ಇಲ್ಲ ಎಂದರೆ ನಿಜ. ನಾರಾಯಣಪ್ಪ 4 ನೇ ಪ್ರತಿವಾದಿಯ ಮಕ್ಕಳಾದ 1 ಮತ್ತು 4 ನೇ ವಾದಿಗಳು ಸಾಕ್ಷಿ ಹೇಳಬೇಕೆಂದು ನನ್ನನ್ನು ಕರೆದಿದ್ದರಿಂದ ನಾನು ಬಂದಿರುತ್ತೇನೆ ಎಂದು ಮುಂದುವರೆದು ಹೇಳುತ್ತಾರೆ. 4 ನೇ ಪ್ರತಿವಾದಿ ತಮ್ಮ ಹೆಂಡತಿ ಮತ್ತು ಮಕ್ಕಳಿಗೆ ಬೆಂಗಳೂರಿನಲ್ಲಿ ನಿವೇಶನ ಮತ್ತು ಮನೆಯನ್ನು ಜೀವನಾಂಶಕ್ಕಾಗಿ ಕೊಟ್ಟಿರುತ್ತಾರೆ ಎಂದರೆ ಗೊತ್ತಿಲ್ಲ. ನರಸಮ್ಮ ಮತ್ತು ವಾದಿಗಳು ಕೂಡ್ಲೂರುನಲ್ಲಿ ವಾಸವಿಲ್ಲ ಎಂದರೆ ನಿಜ. ಅವರು 3 ತಿಂಗಳಿಗೊಮ್ಮೆ ಯಾವಾಗಲೋ ಬಂದು ಹೋಗಿ ಮಾಡುತ್ತಾರೆ.

7. ವಾದಿಗಳು ದಾವಾ ಆಸ್ತಿಗಳಲ್ಲಿ ವ್ಯವಸಾಯ ಮಾಡುತ್ತಾರೋ ಇಲ್ಲವೋ ಗೊತ್ತಿಲ್ಲ ಅವರು ರಾಗಿ ಬೆಳೆಯನ್ನು ತೆಗೆದುಕೊಂಡು ಹೋಗುತ್ತಿದ್ದರು. ಸಾಕ್ಷಿ ಮುಂದುವರೆದು ತೆಂಗಿನಕಾಯಿ ಬೆಳೆಯನ್ನು ತೆಗೆದುಕೊಂಡು ಹೋಗುತ್ತಿದ್ದರು ಎಂದು ಹೇಳುತ್ತಾರೆ. ನನಗೂ ನಾರಾಯಣಪ್ಪರವರಿಗೂ ಸಂಬಂಧ ಸರಿಯಿಲ್ಲ ಆದ ಕಾರಣ ವಾದಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ

ಸರಿಯಲ್ಲ. ನಾರಣಯಣಪ್ಪರವರ ಕುಟುಂಬಕ್ಕೆ ಸಂಬಂಧಿಸಿದಂತೆ ಏನು ವ್ಯವಹಾರ ಆಗಿದೆ ನನಗೆ ಗೊತ್ತಿಲ್ಲ ಎಂದರೆ ನಿಜ.

ಮರು ವಿಚಾರಣೆ ಇಲ್ಲ.

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**

**ಮಾಗಡಿ.**

**ಓ ಎಸ್ ನಂಃ 220-15**
**ಪಿ ಡಬ್ಲ್ಯೂ ಃ 3**

**ದಿಃ 20-03-2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಎ ಎಸ್ ಎಸ್ ವಕೀಲರಿಂದ**

5. ಜಮೀನು ನಮಗೂ ಬರಬೇಕು ಎಂದು ವಾದಿಗಳು ಈ ದಾವೆ ಹೂಡಿರುತ್ತಾರೆ. ವಾದಿಗಳು ಕೂಡ್ಲೂರಿನಲ್ಲಿ ವಾಸವಿಲ್ಲ ಎಂದರೆ ಈಗ ವಾಸವಿಲ್ಲ, ಊರಿಗೆ ವರ್ಷಕ್ಕೆ ಐದಾರು ಬಾರಿ ಬಂದು ಹೋಗಿ ಮಾಡುತ್ತಾರೆ ಎಂದು ಹೇಳುತ್ತಾರೆ. ದಾವಾ ಆಸ್ತಿಗಳಲ್ಲಿ ವಾದಿಗಳು ವ್ಯವಸಾಯ ಮಾಡುತ್ತಾರೆ. ದಾವಾ ಆಸ್ತಿಗಳನ್ನು ನಾನು ಸುಮಾರು 20 ವರ್ಷಗಳಿಂದ ನೋಡುತ್ತಿದ್ದೇನೆ. ವಾದಿಗಳು 20 ವರ್ಷಗಳಲ್ಲಿ ದಾವಾ ಆಸ್ತಿಗಳಲ್ಲಿ ವ್ಯವಸಾಯ ಮಾಡಿಲ್ಲ ಎಂದರೆ ಸರಿಯಲ್ಲ. ಸುಮಾರು 25 ವರ್ಷಗಳಿಂದ ವಾದಿಗಳು ಹಾಗೂ ನರಸಮ್ಮ ಬೆಂಗಳೂರಿನಲ್ಲೇ ವಾಸವಿರುತ್ತಾರೆ ಎಂದರೆ ನಿಜ. ಆದರೆ ಕೂಡ್ಲೂರಿಗೆ ವರ್ಷಕ್ಕೆ ಐದಾರು ಬಾರಿ ಬಂದು ಹೋಗಿ ಮಾಡುತ್ತಾರೆ ಎಂದು ಹೇಳುತ್ತಾರೆ. ನಾರಾಯಣಪ್ಪ, ನರಸಮ್ಮ ಹಾಗೂ ವಾದಿಗಳ ಕುಟುಂಬದಲ್ಲಿ ಏನೇನು ವ್ಯವಹಾರ ಆಗಿದೆ ಗೊತ್ತಿಲ್ಲ. ವಾದಿಗಳು ಬೆಂಗಳೂರಿನ ಯಶವಂತಪುರದಲ್ಲಿ ವಾಸವಿರುತ್ತಾರೆ. 4 ನೇ ಪ್ರತಿವಾದಿಯ ತಂದೆಯ ಹೆಸರು ನರಸಿಂಹಯ್ಯ ಆಗಿರುತ್ತದೆ.

6. ಸರ್ವೆ ನಂ 18/5 ರ ಜಮೀನು ನನ್ನ ಜಮೀನಿನ ಪಕ್ಕದಲ್ಲಿರುತ್ತದೆ. ಆ ಜಮೀನಿನ ಲ್ಲಿ 3 ನೇ ಪ್ರತಿವಾದಿ ಮನೆ ಕಟ್ಟಿರುತ್ತಾರೆ. ಸಾಕ್ಷಿ ಮುಂದುವರೆದು ಸರ್ವೆ ನಂ 22 ರಲ್ಲಿ 9 ನೇ ಪ್ರತಿವಾದಿ ಮನೆ ಕಟ್ಟಿರುತ್ತಾರೆ ಎಂದು ಹೇಳುತ್ತಾರೆ. ನಾನು ಸರ್ವೆ ನಂ 18/5 ರ ದಕ್ಷಿಣಕ್ಕೆ ಇರುತ್ತೇನೆ. ಸರ್ವೆ ನಂ 18/5 ನ್ನು ನಾನು ಕಬಳಿಸಿರುತ್ತೇನೆ ಎಂದು ನನ್ನ, ನಾರಾಯಣಪ್ಪ ಮತ್ತು 9 ನೇ ಪ್ರತಿವಾದಿಯ ಮಧ್ಯೆ ತಕರಾರು ಇರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅಲ್ಲಿ ಎನ್ ಹೆಚ್ 75 ರಸ್ತೆ ಬರುತ್ತದೆ ಎಂದು ಹೇಳುತ್ತಾರೆ. ಜಮೀನುಗಳ ಮಧ್ಯೆ ತಕರಾರು ಇರುವುದರಿಂದ ನನ್ನ 4 ನೇ ಮತ್ತು 9 ನೇ ಪ್ರತಿವಾದಿಗಳ ಮಧ್ಯೆ ಮಾತುಕತೆ ಇರುವುದಿಲ್ಲ ಎಂದರೆ ಸರಿಯಲ್ಲ. ಆದ ಕಾರಣ 4 ನೇ ಮತ್ತು 9 ನೇ ಪ್ರತಿವಾದಿಗೆ ತೊಂದರೆ ಕೊಡಲು ವಾದಿಗಳ ಜೊತೆ ಸೇರಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗಳು ದಾವಾ ಆಸ್ತಿಗಳಲ್ಲಿ ಎಂದಿಗೂ ಉಳುಮೆ ಮಾಡಿಲ್ಲ ಎಂದರೆ ಸರಿಯಲ್ಲ. ನನಗೂ 4 ನೇ ಪ್ರತಿವಾದಿಗೂ ಅಗುವುದಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾರಾಯಣಪ್ಪ, ನರಸಮ್ಮ ಮತ್ತು ವಾದಿಗಳ ಕುಟುಂಬದ ವಿಷಯ ನನಗೆ ಗೊತ್ತಿಲ್ಲ ಎಂದರೆ ನಿಜ.

ಮರು ವಿಚಾರಣೆ ಇಲ್ಲ.

(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಓ

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,

ಮಾಗಡಿ.